ದಿನಾಂಕ: **25.06.2026** ರಂದು ಸಾಕ್ಷಿಯನ್ನು ದಿಃ 04.06.2026 ರ ಆದೇಶದಂತೆ ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

<u>ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. ಎನ್ ಎಸ್ ವಕೀಲರಿಂದಃ</u>

ದಿಃ 30.11.1996 ರಂದು ಜಿ ಎಲ್ ವೆಂಕಟರಾಮಯ್ಯನವರು ತಹಶೀಲ್ದಾರ್ ಕಡೂರು ರವರಿಗೆ ಬರೆದಿರುವ ಅರ್ಜಿಯ ಸ್ವೀಕೃತಿಯನ್ನು ನಿಪಿ-15 ಎಂದು, ವೆಂಕಟರಾಮಯ್ಯ ರವರ ಸಹಿಯನ್ನು ನಿಪಿ-15(ಎ) ಎಂದು, ಜಿ ಎಲ್ ವೆಂಕಟರಾಮಯ್ಯರವರಿಗೆ ಸೇರಿದ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಬ್ಯಾಂಕಿನ ಶೇರು ಪುಸ್ತಕದ 2 ಪುಟಗಳ ಧೃಡೀಕೃತ ನಕಲನ್ನು ನಿಪಿ-16 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ-</u> ಶ್ರೀ ಎಂ ಎಂ ವಕೀಲರಿಂದ ಃ

ನಿಪಿ-15 ರ ಅರ್ಜಿಗೂ ನನಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ಸದರಿ ಅರ್ಜಿಯನ್ನು ನನ್ನ ಬಳಿ ನೀಡಿರುತ್ತಾರೆ. ಯಾವ ದಿನಾಂಕದಂದು ಅರ್ಜಿ ನೀಡಿರುತ್ತಾರೆ ಎಂದು ನನಗೆ ನೆನಪಿಲ್ಲ. ನಿಪಿ-15 ರ ಅರ್ಜಿಯನ್ನು ಜಮೀನನ್ನು ನೀಡಿರುವ ಬಗ್ಗೆ ನೀಡಿರುತ್ತಾರೆ. ನಿಪಿ-15 ರಲ್ಲಿ ನನ್ನ ಸಹಿ ಇರುವುದಿಲ್ಲ ಎಂದರೆ ಸರಿ. ನಿಪಿ-15 ನ್ನು ಸ್ವೀಕರಿಸಿ ಅಧಿಕಾರಿಯ ಸಹಿ ಇಲ್ಲಾ ಎಂದರೆ ಸರಿ. ನಿಪಿ-15 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಅದನ್ನು ನೀಡಿದರೆ ಓದಿ ಹೇಳುತ್ತೇನೆ, ಸಾಕ್ಷಿ ಮುಂದುವರೆದು ಜಮೀನು ನೀಡಿರುವ ಬಗ್ಗ ಬರೆದಿರುತ್ತದೆ. ನಿಪಿ-15 ಕ್ಕೆ ವೆಂಕಟರಾಮಯ್ಯ ರವರು ಕಡೂರಿನ ಪತ್ರಬರಹಗಾರರ ಕಛೇರಿಯಲ್ಲಿ ಹಾಕಿರುತ್ತಾರೆ. ನಿಪಿ-15 ನೊಂದಾಯಿತ ಪತ್ರ ಅಲ್ಲಾ ಎಂದರೆ ಸಾಕ್ಷಿ ಅದು ಕರಾರು ಪತ್ರ ಎಂದು ನುಡಿಯುತ್ತಾರೆ. ನಿಪಿ-15 ಕ್ಕೆ ವೆಂಕಟರಾಮಯ್ಯ ರವರು ಸಹಿ ಮಾಡುವಾಗ ಯಾರು ಯಾರು ಇದ್ದರು ಎಂದರೆ ಸಾಕ್ಷಿ ತಿಮ್ಮಪ್ಪ ರವರು ಹಾಜರಿದ್ದರು ಎಂದು ನುಡಿಯುತ್ತಾರೆ. ನಿಪಿ-15 ರಲ್ಲಿ ತಿಮ್ಮಪ್ಪ ರವರ ಸಹಿ ಇಲ್ಲಾ ಎಂದರೆ ಸಾಕ್ಷಿ ನನಗೆ ಕಾಣಿಸುತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-15 ರ ದಾಖಲಾತಿಗೂ ವೆಂಕಟರಾಮಯ್ಯ ರವರಿಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ಅವರು ನಿಪಿ-15 ರ ಅರ್ಜಿ ನೀಡದೇ ಇದ್ದರೂ ಸಹ ಈ ದಾವೆಗಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

ನಿಪಿ-15 ರಲ್ಲಿ ಬರೆದಿರುವ ವಿಚಾರಗಳು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿತ್ತು ಈಗ ಮರೆತುಹೋಗಿದೆ ಎಂದು ನುಡಿಯುತ್ತಾರೆ. ನಿಪಿ-16 ರ ದಾಖಲೆ ವೆಂಕಟರಾಮಯ್ಯ ರವರು ಬ್ಯಾಂಕಿನಲ್ಲಿ ಸಾಲ ಪಡೆದಿರುವ ಬಗ್ಗೆ ಇರುವ ದಾಖಲೆ. ನಿಪಿ-16 ರ ದಾಖಲೆಯನ್ನು ಅವರ ಸಹಿಯ ಮಾದರಿ ಬೇಕು ಎಂಬ ಉದ್ದೇಶಕ್ಕಾಗಿ ಹಾಜರುಪಡಿಸಿರುತ್ತೇನೆ. ನಿಪಿ-16 ರಲ್ಲಿ ಬ್ಯಾಂಕಿನವರ ಸಹಿ ಇಲ್ಲಾ ಎಂದರೆ ಸಾಕ್ಷಿ ಮೊಹರು ಇದೆ ಎಂದು ನುಡಿಯುತ್ತಾರೆ. ನಿಪಿ-16 ನ್ನು ಯಾವ ದಿನಾಂಕದಂದು ನೀಡಿದ್ದಾರೆ ಎಂದು ನನಗೆ ಮರೆತು ಹೋಗಿದೆ. ನಿಪಿ-15(ಎ) ಮತ್ತು 16 ರಲ್ಲಿರುವ ಸಹಿಗಳು ವೆಂಕಟರಾಮಯ್ಯ ರವರದ್ದಲ್ಲ ಎಂದರೆ ಸರಿಯಲ್ಲ. ನಿಪಿ-15 ನ್ನು ಯಾವಾಗ ಪಡೆದಿರುತ್ತಾರೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಈಗ ನನಗೆ ಮರತುಹೋಗಿದೆ ಎಂದು ನುಡಿಯುತ್ತಾರೆ. ನಿಪಿ-15 ಮತ್ತು 16 ನ್ನು ಈ ದಾವೆಗಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಿಪಿ-15 ಬಿಳಿ ಹಾಳೆಯಲ್ಲಿ ಬರೆದಿರುವ ದಾಖಲೆ ಎಂದರೆ ಸರಿ. ನಿಪಿ-15 ರಲ್ಲಿ ಸೀಲಿನ ಮೇಲಿರುವ ದಿನಾಂಕ ಅಳಿಸಿ ಹೋಗಿದೆ ಎಂದರೆ ಸಾಕ್ಷಿ ತುಂಬಾ ದಿನವಾದ್ದರಿಂದ ಅಳಿಸಿ ಹೋಗಿದೆ ಎಂದು ನುಡಿಯುತ್ತಾರೆ. ನಿಪಿ-15 ರಲ್ಲಿರುವ ದಿನಾಂಕವು ಅಳಿಸಿ ಹೋಗಿರುವುದರಿಂದ ಅದನ್ನು ನ್ಯಾಯಾಲಯದಲ್ಲಿ ಪರಿಗಣಿಸಲಾಗುವುದಿಲ್ಲ ಎಂದರೆ ಸರಿಯಲ್ಲ. ನಿಪಿ-15 ಮತ್ತು 16 ರ ಸಹಿಗಳನ್ನು ನಾನೇ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
**3** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.